

ಭಂಡಾರದಲ್ಲಿ ಮಿಂದೆದ್ದ ಸವದತ್ತಿ ಯಲ್ಲಮ್ಮನ ಸನ್ನಿಧಾನ

# ಬಹುತ್ವದ ಕಡೆಗೆ

ತಿರುವುಗಳಲ್ಲಿ ಕಾಣಸಿಗುವ ಬಂಡಿಗಳ ಸಾಲಂತೂ ನಯನಮನೋಹರ.

ನೋಡಲು ಮುದ ನೀಡುವ ಈ ದೃಶ್ಯಗಳ ಹಿಂದೆ ಬಂಡಿ ಸವಾರರ ಕಷ್ಟವೂ ಇದೆ. ನೂರಾರು ಕಿಲೋಮೀಟರ್ ದೂರದಿಂದ ಆಗಮಿಸುವ ಇವರು ಮಳೆ, ಚಳಿ, ಬಿಸಿಲು ಎನ್ನದೇ ಬಂಡಿ ಪ್ರಯಾಣ ನಡೆಸುವುದು ಸುಲಭದ ಸಂಗತಿಯಲ್ಲ. ಏರು ರಸ್ತೆಗಳು ಬಂದಾಗ, ಎತ್ತಿಗೆ ಭಾರವಾಗದಂತೆ ಬಂಡಿಯಲ್ಲಿನ ಎಲ್ಲರೂ ಇಳಿದು ಬಂಡಿಯನ್ನು ತಳ್ಳುವುದು ಈ ರಸ್ತೆಗಳಲ್ಲಿ ಕಾಣುವ ಸಾಮಾನ್ಯ ದೃಶ್ಯ. ಜಾತ್ರೆಗೆ ಆಗಮಿಸುವ ಕೊಲ್ಹಾರಿ ಬಂಡಿಗಳು ತುಂಬ ಗಟ್ಟಿಮುಟ್ಟು. ಅಷ್ಟೇ ಭಾರವಾಗಿರುತ್ತವೆ. ಸಂಪೂರ್ಣವಾಗಿ ಕಟ್ಟಿಗೆಯಿಂದಲೇ ತಯಾರಿಸುವ ಈ ಬಂಡಿಗಳ ಗಾಲಿಗಳಿಗೆ ಕಬ್ಬಿಣದ ರಿಂಗ್‌ಗಳನ್ನು ಅಳವಡಿಸಲಾಗಿರುತ್ತದೆ. ಎಂತಹ ಕಠಿಣ ರಸ್ತೆಗಳಿದ್ದರೂ ಬಂಡಿಗಳು ಸರಾಗವಾಗಿ ಸಾಗಿಬಿಡುತ್ತವೆ. ದೂರ ಪ್ರಯಾಣಕ್ಕೆ ಹೇಳಿ ಮಾಡಿಸಿದಂತಿರುವ ಈ ಬಂಡಿಗಳನ್ನು ಎಳೆಯುವ ಎತ್ತುಗಳೂ ಅಷ್ಟೇ ಬಲಿಷ್ಠವಾಗಿರಬೇಕಾದುದು ಅನಿವಾರ್ಯ.

ಬಿಸಿಲು, ಮಳೆಯಿಂದ ರಕ್ಷಣೆ ಪಡೆಯುವ ಸಲುವಾಗಿ ಬಂಡಿಗಳ ಮೇಲೆ ಗುಡಿಸಲಿನಂತೆ ಟಾರ್ಪಾಲು ಹೊದಿಕೆ ಹಾಕಲಾಗಿರುತ್ತದೆ. ಬಂಡಿಗಳ ಕೆಳಗೆ ಜೋಲಿ ಮಾಡಿ – ಅಲ್ಲಿ, ನಿತ್ಯ ಉಪಯೋಗಿ ವಸ್ತುಗಳು, ಪಾತ್ರೆ, ಪಗಡೆ, ಆಹಾರ ಸಾಮಗ್ರಿಗಳನ್ನು ಇಡಲಾಗಿರುತ್ತದೆ. ಹಿಂದುಗಡೆ ಮತ್ತೊಂದು ಜೋಲಿ ಮಾಡಿ, ಎತ್ತುಗಳಿಗೆ ಬೇಕಾಗುವ ಹುಲ್ಲು, ಔಷಧಿ ಇತ್ಯಾದಿಗಳನ್ನು



ಚಕ್ಕಡಿ ತಂಗಿದ ಬಯಲಲ್ಲೇ ಒಲೆ–ಅಡುಗೆ